




ಕೋಡಿಬೆಟ್ಟು ರಾಜಲಕ್ಷ್ಮಿ

ವಯೊಲಿನ್ ವಿದ್ವಾನ್ ವಿಠ್ಠಲ ರಾಮಮೂರ್ತಿ ಸಂದರ್ಶನ



# ‘ಸಂಗೀತವನ್ನು ಪರಿಚಯಿಸಿದ ಅಮ್ಮನೇ ನನ್ನ ದೇವತೆ’



**◆ ದಕ್ಷಿಣ ಕನ್ನಡದ ಕರುಂಬಿತ್ತಿಲ್ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿದ ನೀವು ಇಂದು ಅಂತರರಾಷ್ಟ್ರೀಯ ಕಲಾವಿದರಾಗಿ ಗುರುತಿಸಿಕೊಂಡಿದ್ದೀರಿ. ಸಂಗೀತವೆಂಬ ನಾವೆಯಲ್ಲಿ ನೀವು ಇಷ್ಟು ದೂರ ಪಯಣ ಮಾಡುವುದಕ್ಕೆ ನಿಮ್ಮ ಬಾಲ್ಯದ ಶಿಕ್ಷಣ ಹೇಗೆ ಕಾರಣವಾಯಿತು?**

ಪ್ರತಿಯೊಬ್ಬ ವ್ಯಕ್ತಿಗೂ ಬಾಲ್ಯವೇ ಬುನಾದಿಯಾಗಿರುತ್ತದೆ. ಬಾಲ್ಯದ ಸ್ವರೂಪ ಹೇಗೆ ಇದ್ದರೂ ಅದು ಜೀವನದುದ್ದಕ್ಕೂ ಅನುಸರಿಸಿಕೊಂಡು ಬರುವ ಬುತ್ತಿಗಂಟು. ನನ್ನ ಪಾಲಿಗೆ ಶ್ರೀಮಂತ ಪ್ರಕೃತಿಯ ಮಡಿಲಲ್ಲಿ ಕೃಷಿ ಕುಟುಂಬದಲ್ಲಿ ಬೆಳೆಯುವ ಅವಕಾಶ ದೊರೆಯಿತು. ನನ್ನ ಅಮ್ಮ ಕೃಷ್ಣವೇಣಿಯವರಿಗೆ ಹತ್ತನೇ ತರಗತಿ ಕಲಿಕೆ ಮುಗಿದ ಕೂಡಲೆ ಮದುವೆಯಾಗಿ ಬೆಳ್ತಂಗಡಿಯ ಕರುಂಬಿತ್ತಿಲ್ ಮನೆಗೆ ಬಂದಿದ್ದರು. ಹಾಗಾಗಿ ಅವರಿಗೆ ಸಂಗೀತ ಅಭ್ಯಾಸವನ್ನು ಮುಂದುವರೆಸುವುದು